# ಅಮೀರ್ ತರಲೆ



ಅಮೀರ್ ಖಾನ್‌ನ 'ಸತ್ಯಮೇವ ಜಯತೇ' ಮುಗಿದಿದೆ. ಸಾಮಾಜಿಕ ಕಾಳಜಿಯ ವಿಷಯಗಳನ್ನು ಗಂಭೀರ ಒಣ ಚರ್ಚೆಯಾಗಿಸದೆ, ಆಕರ್ಷಕ ನುಡಿಚಿತ್ರದ ರೀತಿಯಲ್ಲಿ ಕಟ್ಟಿಕೊಟ್ಟರೆ; ಅದೂ ಸೂಪರ್‌ಸ್ಟಾರ್ ಒಬ್ಬ ನಿರೂಪಣೆ ಮಾಡಿದರೆ, ಜನರೂ ಆಸಕ್ತಿಯಿಂದ ಮತ್ತು ಗಂಭೀರವಾಗಿ ನೋಡುತ್ತಾರೆ ಎನ್ನುವುದು ಸಾಬೀತಾಗಿದೆ. ಅಷ್ಟರ ಮಟ್ಟಿಗೆ ಈ ಕಾರ್ಯಕ್ರಮ ಜನಪ್ರಿಯವಾಗಲು, ಜನರನ್ನು ವಿಚಾರಕ್ಕೆ ಹಚ್ಚಲು ಅಮೀರ್ ಖಾನ್ ಯಶಸ್ವಿಯಾಗಿದ್ದಾರೆ. ಅಮಿತಾಭ್ ಬಚ್ಚನ್ ನಡೆಸಿಕೊಡುವ 'ಕೌನ್ ಬನೇಗಾ ಕರೋಡ್‌ಪತಿ' ಕಾರ್ಯಕ್ರಮದಷ್ಟು ಭರ್ಜರಿ ಯಶಸ್ಸು ಅಲ್ಲದಿದ್ದರೂ, ಅಮೀರ್‌ನ ಸತ್ಯಮೇವ ಜಯತೇ ವೀಕ್ಷಕರಲ್ಲಿ ಸಾಕಷ್ಟು ಸಂಚಲನ ಉಂಟು ಮಾಡಿರುವುದು ಸುಳ್ಳಲ್ಲ.

ಟೀವಿಯಿಂದ ಹೊರ ಬಂದಿರುವ ಅಮೀರ್ 'ಧೂಮ್-3' ವಿಲ್ಲನ್ ಪಾತ್ರಕ್ಕೆ ಸಿದ್ದನಾಗಿ ವಿದೇಶಕ್ಕೆ ಹಾರಿದ್ದಾನೆ. ಈ ಮಧ್ಯೆ ಆತ ನಟಿಸಿದ, ಇನ್ನಷ್ಟೇ ಬಿಡುಗಡೆ ಆಗಬೇಕಿರುವ 'ತಲಾಶ್' ಚಿತ್ರದ ಬಗ್ಗೆ ನೂರೆಂಟು ಕಥೆಗಳು ಕೇಳಿಬರುತ್ತಿವೆ.

ಸಸ್ಪೆನ್ಸ್- ಥ್ರಿಲ್ಲರ್ ಮಾದರಿಯ 'ತಲಾಶ್'ನಲ್ಲಿ ಅಮೀರ್ ಪೊಲೀಸ್ ಪಾತ್ರ ವಹಿಸಿದ್ದಾನೆ. ಬಾಲಿವುಡ್‌ನ ಹೊಸ ತಲೆಮಾರಿನ ಯಶಸ್ವಿ ನಿರ್ದೇಶಕಿಯರಾದ ರೀಮಾ ಕಾಗ್ಟಿ ಮತ್ತು ಜೋಯಾ ಅಖ್ತರ್ ಇಬ್ಬರೂ ಸೇರಿ ಈ ಚಿತ್ರಕ್ಕೆ ಕೆಲಸ ಮಾಡಿರುವುದರಿಂದ ಪ್ರೇಕ್ಷಕರ ಕುತೂಹಲ ಹೆಚ್ಚಿದೆ. ರೀಮಾ ನಿರ್ದೇಶನ ಮತ್ತು ಜೋಯಾ ಸಂಭಾಷಣೆ ಈ ಚಿತ್ರವನ್ನು ಸಾಕಷ್ಟು ವಿಭಿನ್ನವಾಗಿ ರೂಪಿಸಿದೆ ಎನ್ನುವುದು ಬಾಲಿವುಡ್ ಅಂಬೋಣ. ಆದರೆ ಅಮೀರ್‌ಗೆ ಯಾಕೋ ಉತ್ತರಾರ್ಧ ಖುಷಿಯಾಗಿಲ್ಲವಂತೆ. 'ಉತ್ತರಾರ್ಧದ ಕೆಲವು ದೃಶ್ಯಗಳನ್ನು ರಿಶೂಟ್ ಮಾಡಿ ಎಂದು ಅಮೀರ್ ಹಠ ಹಿಡಿದಿದ್ದಾನೆ' ಎನ್ನುವುದು ಬಾಲಿವುಡ್ ರೂಮರ್. ಹಾಗಾಗಿಯೇ ಚಿತ್ರದ ಬಿಡುಗಡೆಯ ದಿನಾಂಕ ಈಗಾಗಲೆ ಎರಡು ಸಲ ಮುಂದಕ್ಕೆ ಹೋಗಿದೆ. ಸದ್ಯದ ಮಾಹಿತಿಯ ಪ್ರಕಾರ. ನವೆಂಬರ್ 30 ಹೊಸ ದಿನಾಂಕ!

ಸಾಕಷ್ಟು ಸ್ವತಂತ್ರ ವಿಚಾರಗಳ ನಿರ್ದೇಶಕಿ ರೀಮಾ, ಇಂತಹ ಸ್ಟಾರ್ ಕಿರಿಕಿರಿಗೆ ಒಪ್ಪುತ್ತಾರೆಯೆ.. ಎನ್ನುವುದು ಕುತೂಹಲಕರ. ಬಲ್ಲ ಮೂಲಗಳ ಪ್ರಕಾರ, ರೀಮಾಗೆ ಬದಲಾಯಿಸಲು ಮನಸ್ಸಿಲ್ಲವಂತೆ. ಹಾಗೆಂದು ಸಹ ನಿರ್ಮಾಪಕನೂ ಆಗಿರುವ ಅಮೀರ್‌ನನ್ನು ಎದುರು ಹಾಕಿಕೊಂಡರೆ ಚಿತ್ರ ತೆರೆಗೆ ಬರುವುದು ಕಷ್ಟ. 'ಈ ಚಿತ್ರ ಇತ್ತೀಚೆಗೆ ಬಂದ ಕಹಾನಿ ಚಿತ್ರದ ನಿರೂಪಣೆಯನ್ನೇ ಹೋಲುತ್ತದೆ' ಎನ್ನುವುದು ಕೇಳಿಬರುತ್ತಿರುವ ಇನ್ನೊಂದು ಗಾಳಿಮಾತು. ಚಿತ್ರತಂಡ ಅದನ್ನು ನಿರಾಕರಿಸಿದೆ. ಅಮೀರ್ ವಿದೇಶದಿಂದ ಬಂದ ಮೇಲೆಯೂ ತಲಾಶ್ ಚಿತ್ರತಂಡಕ್ಕೆ ತಕ್ಷಣಕ್ಕೆ ಸಿಗುವುದು ಕಷ್ಟ. ಇನ್ನೊಂದು ಚಿತ್ರಕ್ಕೆ ಆ ದಿನಗಳ ಕಾಲ್‌ಷೀಟ್ ಕೊಟ್ಟಾಗಿದೆ ಎನ್ನುವ ಸುದ್ದಿ ಇದ್ದು, ಒಟ್ಟಾರೆ ತಲಾಶ್ ಚಿತ್ರದ ನಿಜವಾದ ಬಿಡುಗಡೆ ದಿನಾಂಕ ಯಾವುದು ಎಂಬುದನ್ನು ಪ್ರೇಕ್ಷಕರೇ ತಲಾಶ್ ಮಾಡಬೇಕಾದ ಸ್ಥಿತಿ ಬಂದಿದೆ!



# ರಾಣಿಯ ದರ್ಬಾರ್

ರಾಣಿ ಮುಖರ್ಜಿ ಈಗ ಮತ್ತಷ್ಟು ವಿಭಿನ್ನ ಪಾತ್ರಗಳತ್ತ ಮುಖ ಮಾಡಿದ್ದಾಳೆ. ಅಮೀರ್ ಖಾನ್ ಜತೆಗೆ ನಟಿಸಿರುವ 'ತಲಾಶ್' ಚಿತ್ರದಲ್ಲಿ ರಾಣಿಯದ್ದು ಅತ್ಯಂತ ಶಕ್ತಿಶಾಲಿ ನಟನೆ ಎಂದು ಈಗಾಗಲೇ ಸುದ್ದಿ ಹಬ್ಬಿದೆ. ಅದರಲ್ಲೂ ಅಷ್ಟೇ ಪ್ರಮುಖ ಇನ್ನೊಂದು ಪಾತ್ರವನ್ನು ಕರೀನಾ ಕಪೂರ್ ನಿರ್ವಹಿಸಿದ್ದು ಆಕೆಯ ಎದುರಿಗೆ ರಾಣಿಯ ನಟನೆಯ ತೂಕ ಒಂದಷ್ಟು ಹೆಚ್ಚೇ ಇದೆ ಎನ್ನುವ ಮಾತು ಕೇಳಿ ಬಂದಿದೆ.

ಈ ಮಧ್ಯ ಅಪ್ಪಟ ಮರಾಠಿ ಹುಡುಗಿಯ ಸಾಂಪ್ರದಾಯಿಕ ಪಾತ್ರವೊಂದರಲ್ಲಿ ರಾಣಿ ನಟಿಸಿದ್ದಾಳೆ. ದಕ್ಷಿಣದ ರಿಮೇಕ್ ಆದ 'ಅಯ್ಯ' ಎನ್ನುವ ಈ ಹಿಂದಿ ಚಿತ್ರಕ್ಕೆ ನಾಯಕ ಮಲಯಾಳಂನ ಸೂಪರ್‌ಸ್ಟಾರ್ ಪೃಥ್ವಿರಾಜ್. ಈ ಹಿಂದೆ ಉರುಮಿ ಎಂಬ ರಾಷ್ಟ್ರಪ್ರಶಸ್ತಿ ವಿಜೇತ ಚಿತ್ರಸಹಿತ ಹಲವು ಸಿನಿಮಾಗಳಲ್ಲಿ ಮಿಂಚಿರುವ ಪೃಥ್ವಿರಾಜ್ ಜತೆ ನಟಿಸೋದಕ್ಕೆ ರಾಣಿ ಥ್ರಿಲ್ ಆಗಿದ್ದಾಳೆ. ಈ ಚಿತ್ರದಲ್ಲಿ ಆರು ಹಾಡುಗಳಿದ್ದು ಅದರಲ್ಲಿ ಮೂರು ಐಟಂ ಸಾಂಗ್‌ಗಳಿವೆಯಂತೆ! ತಮಿಳು ಪೇಂಟರ್ ಒಬ್ಬ ಮರಾಠಿ ಹುಡುಗಿಯ ಜತೆಗೆ ಬೆಳೆಸುವ ಪ್ರೇಮ ಮತ್ತು ಅಲ್ಲಿ ಉಂಟಾಗುವ ತಮಾಷೆಯ ಪ್ರಸಂಗಗಳು ಚಿತ್ರದಲ್ಲಿವೆಯಂತೆ. ಒಟ್ಟಾರೆ ರಾಣಿ ಗಂಭೀರ ಮತ್ತು ತಮಾಷೆ ಎರಡರಲ್ಲೂ ಮಿಂಚಲು ಹೊರಟಂತಿದೆ.

■ ಬಿಂದು